# ಬೇಕು ನೈತಿಕ ಶಿಕ್ಷಣ



-ಗೋಪಿ ಸಸಿತೋಟ

ಭ್ರಷ್ಟಾಚಾರ, ವಂಚನೆ, ಅಪರಾಧ, ಭಯೋತ್ಪಾದನೆ, ಜಾತಿ ಹಾಗೂ ಕೋಮುವಾದ, ದ್ವೇಷ ವ್ಯಾಪಕವಾಗುತ್ತಿರುವ ಈ ದಿನಗಳಲ್ಲಿ ಪದೇ ಪದೇ ಕೇಳಿ ಬರುತ್ತಿರುವ ಮಾತು, 'ಶಾಲಾ- ಕಾಲೇಜುಗಳಲ್ಲಿ ನೈತಿಕ ಶಿಕ್ಷಣಕ್ಕೆ ಒತ್ತು ನೀಡಬೇಕು' ಎಂಬುದು. ಹಾಗಾದರೆ ಹಿಂದೆ ಈ ನೈತಿಕ ಶಿಕ್ಷಣ ಇರಲಿಲ್ಲವೇ? ಆ ಶಿಕ್ಷಣ ಪಡೆದವರೂ ಭ್ರಷ್ಟರಾಗಿ ಸಮಾಜಕ್ಕೆ, ದೇಶಕ್ಕೆ ಕಳಂಕ ತರುತ್ತಿದ್ದಾರಲ್ಲಾ? ಎಂಬ ಪ್ರಶ್ನೆಗಳು ಏಳುವುದು ಸಹಜ. ಕಾಳುಗಳ ರಾಶಿಯಲ್ಲಿ ನಾಲ್ಕಾರು ಜೊಳ್ಳು ಕಾಳುಗಳು ಬರಬಹುದು ಬಿಡಿ. ಅದು ಸಹಜ ಕೂಡಾ. ಈ ಆಧುನಿಕ ಯುಗದ ಮಂತ್ರವೆಂದರೆ ಮನುಷ್ಯ, ಯಂತ್ರ ಮತ್ತು ಹಣ. ಕೇವಲ ಹಣ ಗಳಿಸುವ ಶಿಕ್ಷಣ ನೀಡಿದರೆ ಸಾಲದು. ಅದು ಸ್ವಾರ್ಥವನ್ನು ಹುಟ್ಟುಹಾಕುತ್ತದೆ. ಜೊತೆಗೊಂದಿಷ್ಟು ನೈತಿಕ ಗುಣ ಬೆಳೆಸುವ ಶಿಕ್ಷಣ ನೀಡಿದರೆ ಆರೋಗ್ಯಕರ, ದೇಶಭಕ್ತ, ಪ್ರಾಮಾಣಿಕ, ಶಿಸ್ತು ರೂಢಿಸಿಕೊಂಡ ನಾಗರಿಕರಾಗಿ ದೇಶ ಪ್ರಗತಿಯತ್ತ ಬಹು ಬೇಗ ದಾಪು ಕಾಲಿಡಲು ಸಾಧ್ಯ ಎಂಬುದು ಶಿಕ್ಷಣ ತಜ್ಞರ, ಸಮಾಜದ ಕಾಳಜಿಯುಳ್ಳವರ ಅಂಬೋಣ. ಈ ಕಾಳಜಿಯ ಹಿಂದೆ ಹಲವು ಅಂಶಗಳು ಅಡಕವಾಗಿವೆ. ಚಿಕ್ಕವರಿದ್ದಾಗ ಶಾಲೆಯಲ್ಲಿ ವಾರಕ್ಕೆ ಒಂದು ಗಂಟೆ ನೈತಿಕ ಶಿಕ್ಷಣ ತರಗತಿ ಇರುತ್ತಿತ್ತು. ಶಿಕ್ಷಕರು ಮಹಾಕಾವ್ಯಗಳಲ್ಲಿ ಬರುವ ಶೂರರ, ಸಾತ್ವಿಕ ಪಾತ್ರಗಳ, ಐತಿಹಾಸಿಕ ವ್ಯಕ್ತಿಗಳ, ದೇಶಭಕ್ತರ, ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದವರ ಕಥೆಗಳನ್ನು ಹೇಳಿದಾಗ ಮಕ್ಕಳಲ್ಲಿ ಮನಸ್ಸಿನಲ್ಲಿ ಅದು ಅಚ್ಚೊತ್ತುತ್ತಿತ್ತು. ಇನ್ನೂ ಅರಳುತ್ತಿರುವ ಮನಸ್ಸಿನಲ್ಲಿ ತಾವೂ ಅಂತಹ ಗುಣ ಬೆಳೆಸಿಕೊಳ್ಳಬೇಕು ಎಂಬ ಭಾವನೆ ಮೂಡುತ್ತಿತ್ತು. ಜೊತೆಗೆ ಅಮರಚಿತ್ರ ಕಥೆಗಳು, ಪಂಚತಂತ್ರ ಕಥೆಗಳು, ಖ್ಯಾತ ಸಾಹಿತಿಗಳ ಬರೆದ ಚಿಕ್ಕ ಚಿಕ್ಕ ಕಥೆಗಳ ಜೊತೆ ನೀತಿಪಾಠ ಎಂಬ ಪುಸ್ತಕವನ್ನೂ ಅಳವಡಿಸಲಾಗುತ್ತಿತ್ತು. ಈ ನೀತಿಪಾಠದ ಪರೀಕ್ಷೆ ಇಲ್ಲದಿದ್ದರೂ ಶಿಕ್ಷಕರು ತರಗತಿಗಳಲ್ಲಿ ಕಥೆ ಹೇಳಿ ನೀತಿಯನ್ನು ಪ್ರಸ್ತುತಪಡಿಸಲು ಕೇಳುತ್ತಿದ್ದರು. ಹಾಗಾಗಿ ಒಂದಿಷ್ಟು ಆಸಕ್ತಿಯಿಂದ ಈ ಪಾಠಗಳನ್ನು ಓದುವ ಹವ್ಯಾಸ ಬೆಳೆಯುತ್ತಿತ್ತು. ಜೊತೆಗೆ ಒಳ್ಳೊಳ್ಳೆಯ ಕಥೆ- ಕಾದಂಬರಿಗಳನ್ನು ಶಿಕ್ಷಕರೇ ಆಯ್ಕೆ ಮಾಡಿ ಮಕ್ಕಳಿಗೆ ಓದಿಕೊಂಡು ಬರುವ ತಿಳಿಸುವ ಪರಿಪಾಠವೂ ಇತ್ತು. ಕಥೆ ಹೇಳುವುದರ ಜೊತೆಗೆ ಸಾಮೂಹಿಕ ಚರ್ಚೆ, ಯೋಗ, ಧ್ಯಾನದ ಮೂಲಕವೂ ಇದನ್ನು ಹೇಳುವ ಅಭ್ಯಾಸ ಬೆಳೆಯಿತು. 1976ಕ್ಕಿಂತ ಮುನ್ನ ಭಾರತದಲ್ಲಿ ಶಿಕ್ಷಣ ನೀಡುವುದು ಆಯಾ ರಾಜ್ಯಗಳ ಹೊಣೆಯಾಗಿತ್ತು. ಆದರೆ 1976ರ ಸಂವಿಧಾನದ ತಿದ್ದುಪಡಿಯಿಂದಾಗಿ ಇದನ್ನು ಕೇಂದ್ರ ಸರ್ಕಾರ ವಹಿಸಿಕೊಂಡಿತು. ಅಂದರೆ ಶಿಕ್ಷಣದ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಜಾರಿಗೊಳಿಸುವ ಜವಾಬ್ದಾರಿ ಕೇಂದ್ರದ್ದು. ಪರಿಣಾಮ 'ರಾಷ್ಟ್ರೀಯ ಶಿಕ್ಷಣ ನೀತಿ' ರೂಪುಗೊಂಡಿತು. ಶಿಕ್ಷಣದಲ್ಲಿ ಏಕರೂಪ ಜಾರಿ, ವಯಸ್ಕ ಶಿಕ್ಷಣವನ್ನು ಚಳವಳಿಯನ್ನಾಗಿ ರೂಪಿಸುವುದು, ಎಲೆಮೆಂಟರಿ ಶಿಕ್ಷಣದಲ್ಲಿ ಗುಣಮಟ್ಟ ತಂದು, ಉನ್ನತ ಶಿಕ್ಷಣವನ್ನು ವಿಸ್ತರಿಸುವುದು ಈ ನೀತಿಯ ಪ್ರಮುಖ ಅಂಶಗಳು. ಆದರೆ ನೈತಿಕ ಶಿಕ್ಷಣಕ್ಕೆ ಎಲ್ಲಿಯೂ ಆದ್ಯತೆ ನೀಡಿಲ್ಲ. ಅದು ಆಯಾ ಶಾಲೆಗಳಿಗೆ ಬಿಟ್ಟಿದ್ದು. ಶಾಲಾ- ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಪ್ರತಿ ವರ್ಷವೂ ಲಕ್ಷಾಂತರ ವಿದ್ಯಾರ್ಥಿಗಳನ್ನು ಪದವೀಧರರನ್ನಾಗಿ ಮಾಡುತ್ತಿವೆ. ಕಲೆ, ವಾಣಿಜ್ಯ, ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಆಡಳಿತ ನಿರ್ವಹಣೆ, ಮಾನವ ಸಂಪನ್ಮೂಲ ಮೊದಲಾದ ಕ್ಷೇತ್ರಗಳಲ್ಲಿ ಪರಿಣಿತ ಯುವಕ/ ಯುವತಿಯರು ಬರುತ್ತಿದ್ದಾರೆ. ಆದರೆ ಎಲ್ಲೋ ಒಂದು ಕಡೆ ಕೊರತೆ ಕಾಣುತ್ತಿದೆ. ಅದು ಮಾನವೀಯ, ನೈತಿಕ ಮೌಲ್ಯಗಳ ಕೊರತೆ. ಶಾಲಾ- ಕಾಲೇಜುಗಳಲ್ಲಿ ಪೈಪೋಟಿ ತೀವ್ರವಾಗಿದೆ. ಒಬ್ಬರು ಇನ್ನೊಬ್ಬರನ್ನು ಅಂಕ ಗಳಿಸುವಲ್ಲಿ ಮೀರಿಸುವ ಯೋಗ್ಯತೆಯನ್ನು ತುಂಬಲಾಗುತ್ತಿದೆ. ಆದರಿದು ಪರಸ್ಪರ ಅಸೂಯೆ, ದ್ವೇಷ, ಶತ್ರುತ್ವಕ್ಕೆ ನಾಂದಿ ಹಾಡುತ್ತಿದೆ.

ಪರಸ್ಪರರನ್ನು ಅಭಿನಂದಿಸುವ, ಸಹಾಯ ಮಾಡುವ ಗುಣ ಕಡಿಮೆಯಾಗುತ್ತಿದೆ. ಶಾಲೆಗಳಲ್ಲಿ ನೈತಿಕ ಶಿಕ್ಷಣವನ್ನು ಪಠ್ಯದಲ್ಲಿ ಸೇರಿಸಿ ಆ ಮೂಲಕ ಪಾಠ ಮಾಡಲು ಸಾಧ್ಯವಿಲ್ಲ ಎಂಬುದು ಶಿಕ್ಷಕರ ಅಂಬೋಣ. ಆದರೆ ಒಬ್ಬ ವಿದ್ಯಾರ್ಥಿ ಸಹಪಾಠಿಯ ಪುಸ್ತಕವನ್ನು ಕದ್ದರೆ, ಬಯ್ದರೆ ಶಿಕ್ಷೆಯನ್ನು ನೀಡುತ್ತಾರಲ್ಲಾ, ಇದು ಒಂದು ಬಗೆಯ ನೈತಿಕ ಶಿಕ್ಷಣವೇ. ಜೊತೆಗೆ ಭಾಷಾ ವಿಷಯ ಮತ್ತು ಸಾಹಿತ್ಯದಲ್ಲಿ ಒಳ್ಳೆಯ ಕಥೆ, ಕವನ, ವಿದ್ವಾಂಸರ, ದೇಶಭಕ್ತರ ಕುರಿತು ವಿವರಗಳನ್ನು ಕೊಡುವ ಮೂಲಕ ಕೂಡಾ ನೈತಿಕ ಶಿಕ್ಷಣ ನೀಡಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದು ಉತ್ತಮ ಸಮಾಜ ನಿರ್ಮಾಣಕ್ಕೆ ಬೇಕಾದ ಶಕ್ತಿಯಿದೆ. ಈ ನಿಟ್ಟಿನಲ್ಲಿ ಆ ವಿದ್ಯಾರ್ಥಿಯನ್ನು ಉತ್ತಮ ವ್ಯಕ್ತಿಯನ್ನಾಗಿ ರೂಪಿಸುವ, ಪೂರ್ಣ ಪ್ರಮಾಣದ ಉಪಕಾರಿಯನ್ನಾಗಿ ಬೆಳೆಸುವ ಸಾಧನವೆಂದರೆ ಸರಿಯಾದ ಪಠ್ಯಕ್ರಮವಿರುವ ಶಿಕ್ಷಣ. ಏನೇ ಬಂದರೂ ಹೆದರದ, ಎದೆಗುಂದದ, ಆಧ್ಯಾತ್ಮದ ಗುಣಗಳೊಂದಿಗೆ ಸತ್ಯವನ್ನು ಶೋಧಿಸುವ ಗುಣಗಳನ್ನು ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲೇ ಹುಟ್ಟು ಹಾಕಬೇಕು. ಅದು ಗಣಿತವೇ ಇರಲಿ, ವಿಜ್ಞಾನ, ಇತಿಹಾಸವೇ ಇರಲಿ, ಕೇವಲ ಎಂಜಿನಿಯರ್, ವೈದ್ಯರ ಉತ್ಪಾದನೆ ಮಾಡಿದರೆ ಸಾಲದು. ಶಿಕ್ಷಣದ ಪ್ರಮುಖ ಉದ್ದೇಶ ಒಳ್ಳೆಯ ವ್ಯಕ್ತಿ, ಉತ್ತಮ ಗುಣಗಳನ್ನು ಬೆಳೆಸುವುದು. ಸಾಮಾಜಿಕ ಜೀವನದಲ್ಲಿ ಶಿಸ್ತು, ಒಳ್ಳೆಯ ನಡವಳಿಕೆ, ಮೌಲ್ಯಗಳ ಅಳವಡಿಕೆ ಈ ಶಿಕ್ಷಣದ ಗುರಿಯಾಗಿರಬೇಕು. ಒಳ್ಳೆಯದು ಯಾವುದು, ಕರ್ತವ್ಯಗಳೇನು, ಮಾನವೀಯತೆ ಗುಣ ಹೇಗೆ ಬೆಳೆಸಿಕೊಳ್ಳುವುದು, ಇನ್ನೊಬ್ಬರನ್ನು ಗೌರವಿಸುವುದು ಹೇಗೆ ಎಂಬ ಗುಣಗಳನ್ನು ಈ ಶಿಕ್ಷಣ ಹುಟ್ಟುಹಾಕುವಂತಿರಬೇಕು. ಈ ಜಗತ್ತಿನಲ್ಲಿ ಹಲವು ಯುದ್ಧಗಳು ಆಗಿವೆ. ಜಾತಿ, ಜನಾಂಗ, ವರ್ಣದ ಆಧಾರದ ಮೇಲೆ ದ್ವೇಷದ ಕಿಡಿ ಹೊತ್ತಿದೆ. ಲಕ್ಷಾಂತರ ಅಮಾಯಕರ ಬರ್ಬರ ಹತ್ಯೆ ಆಗಿದೆ. ಇದೆಲ್ಲ ಆಗಿದ್ದು ಪರಸ್ಪರ ಗೌರವ, ನಂಬಿಕೆಯ ಮೇಲೆ ಒಟ್ಟಾಗಿ ಬಾಳಬೇಕೆಂಬ ತಿಳಿವಳಿಕೆಯ ಕೊರತೆಯಿಂದ. ನಂಬಿಕೆ, ಭ್ರಾತೃತ್ವವನ್ನು ಚಿಕ್ಕ ವಯಸ್ಸಿನಿಂದಲೇ ಬೆಳೆಸುವ ನೈತಿಕ ಶಿಕ್ಷಣವಿದ್ದರೆ ಇಂತಹ ಅವಗಢಗಳನ್ನು ತಪ್ಪಿಸಬಹುದು


Seshadripuram Educational Trust

**SESHADRIPURAM LAW COLLEGE**

Bangalore - 560 020

Affiliated to Karnataka State Law University, approved by Bar Council of India and recognized by Govt. of Karnataka)

**ADMISSIONS OPEN**

**FOR SESSION 2012 -13**







**B.B.A., LL.B.** (Bachelor of Business Administration and Laws) 5-year Integrated Course. ELIGIBILITY : 45% OR MORE IN P.U.C. +2 Higher Secondary Pass Certificate.

**B.A., LL.B.** (Bachelor of Arts and Laws) 5-year Integrated Course ELIGIBILITY : 45% OR MORE IN P.U.C. +2 Higher Secondary Pass Certificate.

**LL.B.** 3-year Course. **ELIGIBILITY:** 45% in degree.

HIGHLIGHTS: • College has bagged 4 ranks at the university level • Students are trained for moot court • Guest lectures from Judges and senior advocates organised

*Contact office:* (080) 22955367, (080) 22955362 Between 8.30 a.m. and 3.30 a.m.

**website:** www.spmlawcollege.ac.in **e-mai:** principal_slcb@rediffmail.com slcb.lawcollege@gmail.com

**N.R. Pandith Aradhya** President

**Prof. A.G. Asha** Principal

**Dr. Wooday P. Krishna** Hon. General Secretary